# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ 93, ವಸಂತನಗರ

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:03-09-2022 ರಂದು ಶನಿವಾರ ಬೆಳಿಗ್ಗೆ 11.30 ಗಂಟೆಗೆ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ತೋಟಗಾರಿಕೆ ಅಧೀಕ್ಷಕರು (ಪೂರ್ವ) ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:93 ಬಿಬಿಎಂಪಿ ಸಭೆಯನ್ನು ನಡೆಸಿಕೊಟ್ಟರು.

ಸಮಿತಿಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳು,

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ.ಸುಧೀಂದ್ರ ಕುಮಾರ್ | ನೋಡೆಲ್ ಅಧಿಕಾರಿಗಳು | |
| 2 | ಶ್ರೀ. ರವೀಂದ್ರ | ಝೋನಲ್ ಕಮಿಷನರ್ (ಪೂರ್ವ) ಮತ್ತು ವಿಶೇಷ ಆಯುಕ್ತರು (ಯೋಜನೆ) | |
| 3 | ಶ್ರೀ.ಧರ್ಮರಾಜ ಜಿ ನಾಯಕ್ | ಸಹಾಯಕ ಅಭಿಯಂತರರು | |
| 4 | ಶ್ರೀ.ಜಯರಾಜು | ಕೆಲಸ ಪರಿವೀಕ್ಷಕರು | |
| 5 | ಶ್ರೀ.ಮೂರ್ತಿ ಎಲ್.ಎಂ | ಕಂದಾಯ ವಸೂಲಿಗಾರರು | |
| 6 | ಶ್ರೀ.ರೇಣುಕಾಂಬ | ಹಿರಿಯ ಆರೋಗ್ಯ ಪರಿವೀಕ್ಷಕರು | |
| 7 | ಶ್ರೀ.ಅಜೀತ್ ಕುಮಾರ್. | ವಾರ್ಡ್ ಮಾರ್ಷಲ್ | |
| 8 | ಶ್ರೀ.ಶರತ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 9 | ಶ್ರೀಮತಿ.ಸನಾ ಅಯುಬ್ | ವೈದ್ಯಾಧಿಕಾರಿಗಳು | |
| 10 | ಶ್ರೀ.ಜೆ.ಕೆ.ಸಿ ಕುಮಾರ | ಸದಸ್ಯರು | |
| 11 | ಶ್ರೀಮತಿ.ಪ್ರಿಯಾಚೆಟ್ಟಿ | ಸದಸ್ಯರು | |
| 12 | ಶ್ರೀ.ಲಕ್ಷ್ಮೀಶ್ (ಲಚ್ಚಿ) | ಸದಸ್ಯರು | |
| 13 | ಶ್ರೀ.ವೈಭವ್ | ಸದಸ್ಯರು | |
| 14 | ಶ್ರೀ.ಪ್ರಕಾಶ್ ನೆಡುಂಗಾಡಿ | ಎಎಪಿ ವಾರ್ಡ್ 93 ಉಸ್ತುವಾರಿ | |
| 15 | ಶ್ರೀ.ಮನೋಜ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | |
| 16 | ಶ್ರೀ.ರಾಮಲಿಂಗಮ್ | ವಾರ್ಡ್ ರಹವಾಸಿ | |
| 17 | ಶ್ರೀ.ಚಂದ್ರ ಪ್ರಕಾಶ್ | ವಾರ್ಡ್ ರಹವಾಸಿ | |
| 18 | ಶ್ರೀ.ಕಾಂತ್‌ಸ್ವಾಮಿ | ಸದಸ್ಯರು | |
| 19 | ಶ್ರೀ.ಎಂ.ಎಸ್. ನಂಜುಡಮೂರ್ತಿ | ವಾರ್ಡ್ ರಹವಾಸಿ | |

Scanned with CamSca

**ಈ ಕೆಳಕಂಡ ಅಂಶಗಳನ್ನು ಚರ್ಚಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಿದರು.**

1) ಆಟೋ ಟಿಪ್ಪರ್/ಕಾಂಪ್ಯಾಕ್ಟರ್‌ಗಳ ಹಾಜರಾತಿ ವಿವರ, ವಾರ್ಡ್ ಮಟ್ಟದಲ್ಲಿ ಕಸ ವಿಂಗಡಣೆಯ ಸುಧಾರಣೆಯ, ಪೌರಕಾರ್ಮಿಕರಿಗೆ ಸುರಕ್ಷತಾ ಪರಿಕರಗಳು ಮತ್ತು ಸಾಧನ ಸಲಕರಣೆಗಳ ಕುಂದುಕೊರತೆಗಳನ್ನು ಹಾಗೂ ಪೌರಕಾರ್ಮಿಕರಿಗೆ ನೀಡಬೇಕಾಗಿರುವ ಸೌಲಭ್ಯಗಳ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.
2) ವಾರ್ಡ್ ಸಂಖ್ಯೆ:93 ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸದೆ ಇರುವ ಬೀದಿ ದೀಪಗಳನ್ನು ಗುರುತಿಸಿ ತಕ್ಷಣ ದುರಸ್ಥಿ ಮಾಡಲು ಹಾಗೂ ಹೊಸದಾಗಿ ಅವಶ್ಯಕವಿರುವ ಬೀದಿ ದೀಪಗಳನ್ನು ಅಳವಡಿಸಲು ಸಹಾಯಕ ಅಭಿಯಂತರರು ವಿದ್ಯುತ್ ವಿಭಾಗ (ಪೂರ್ವ) ರವರಿಗೆ ಜರೂರಾಗಿ ಕ್ರಮಕೈಗೊಳ್ಳಲು ಸೂಚಿಸಿದರು.
3) ವಾರ್ಡ್‌ವಾರು ಬೃಹತ್ ನೀರುಗಾಲುಗಳ ವಿವರಗಳ ಬಗ್ಗೆ ಮತ್ತು ಕಾಲುವೆಗಳಲ್ಲಿ ಹೂಳು ತೆಗೆಯುವ ಕಾಮಗಾರಿಗಳ ವಿವರ ಹಾಗೂ ಬೃಹತ್ ನೀರುಗಾಗಲುವೆಗಳ ಶಿಥಿಲಗೊಂಡಿರುವ ತಡೆಗೋಡೆಗಳನ್ನು ದುರಸ್ಥಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.
4) ವಾರ್ಡ್‌ನಲ್ಲಿ ಸೊಳ್ಳೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸ್ಪ್ರೇಯಿಂಗ್/ಫಾಗಿಂಗ್‌ಗಳ ವೇಳಾಪಟ್ಟಿ ಮತ್ತು ವಿತರಣೆಯಾಗಿರುವ ವ್ಯಾಪಾರ ಪರವಾನಗಿ ಪಟ್ಟಿ ಬಗ್ಗೆ ಚರ್ಚಿಸಿದರು. ಹಾಗೂ ಪ್ಲಾಸ್ಟಿಕ್ ಬಳಕೆಯ ನಿಯಂತ್ರಣ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಹಿರಿಯ ಆರೋಗ್ಯ ಸಹಾಯಕಿ, ಆರೋಗ್ಯ ವಿಭಾಗ ರವರಿಗೆ ಸೂಚಿಸಿದರು.
5) ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗುಂಡಿಗಳನ್ನು ಗುರುತಿಸಿ ದುರಸ್ಥಿ ಕ್ರಮವಹಿಸಲು ತಿಳಿಸಿದರು. ಹಾಗೂ ರಸ್ತೆ ಮತ್ತು ಚರಂಡಿ ದುರಸ್ಥಿ ಕೆಲಸ ನಿರ್ವಹಿಸಲು. ಅನಧಿಕೃತ ಕಟ್ಟಡ ಹಾಗೂ ಪಾದಚಾರಿ ಮಾರ್ಗಗಳ ಅತಿಕ್ರಮಣ ತೆರೆವುಗೊಳಿಸಲು ಮತ್ತು ವಿ.ಎಸ್. ರಾಜು ರಸ್ತೆಯಲ್ಲಿ ನಿರ್ಮಾಣ ಹಂತ್ತದ ನಿವೇಶನದಲ್ಲಿ ನೀರು ತುಂಬಿಕೊಂಡಿದ್ದು, ಕೂಡಲೇ ತೆರವುಗೊಳಿಸಲು ಸಹಾಯಕ ಅಭಿಯಂತರರು ರವರಿಗೆ ಸೂಚಿಸಿದರು.
6) ಕಂದಾಯ ವಸೂಲಾತಿ ವಿವರದ ಬಗ್ಗೆ ಚರ್ಚಿಸಿ ಹಾಗೂ ಮತದಾರರ ಗುರುತಿನ ಚೀಟಿ ಪರಿಶೀಲಿಸಿ ಹಾಗೂ ಆಧಾರ್ ಕಾರ್ಡ್‌ನ ಜೊತೆ ಲಿಂಕ್ ಮಾಡಲು ಸೂಕ್ತ ಕ್ರಮವಹಿಸಲು ಕಂದಾಯ ಇಲಾಖೆಯವರಿಗೆ ಸೂಚಿಸಿದರು.
7) ವಾರ್ಡ್‌ನ ಉದ್ಯಾನವನಗಳಲ್ಲಿ ದೀಪಗಳು ಕಾರ್ಯನಿರ್ವಹಿಸುತ್ತಿರುವ ಕುರಿತು ಹಾಗೂ ಶೌಚಾಲಯದ ಸೌಲಭ್ಯದ ಒದಗಿಸಲು ಹಾಗೂ ಉದ್ಯಾನವನಗಳಲ್ಲಿ ಸುಚಿತ್ವ ಕಾಪಾಡಲು ಹಾಗೂ ಗಿಡಗಳ ನಿರ್ವಹಣೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ತೋಟಗಾರಿಕೆಯವರಿಗೆ ಸೂಚಿಸಿದರು.
8) ವಾರ್ಡ್‌ನಲ್ಲಿ ನೇತಾಡುವ ಕೊಂಬೆಗಳನ್ನು ಹಾಗೂ ರಸ್ತೆ ಅಡಚಣೆಯ ಮರಗಳನ್ನು ಕಟಾವು ಮತ್ತು ತೆರವುಗೊಳಿಸಲು ಅರಣ್ಯ ಇಲಾಖೆಯವರಿಗೆ ಸೂಚಿಸಿದರು.
9) ವಾರ್ಡ್‌ನ ಅಣ್ಣಯ್ಯಪ್ಪ ಬ್ಲಾಕ್ ಮತ್ತು ಶ್ರೀಪುರಂನಲ್ಲಿ ಹೊಸದಾಗಿ ಸಿ.ಸಿ ರಸ್ತೆ ನಿರ್ಮಾಣ ಮಾಡಲ ಕುರಿತು ಹಾಗೂ ದುರಸ್ಥಿ ಕಾಮಗಾರಿಗಳ ಬಗ್ಗೆ ಚರ್ಚಿಸಿದರು.
10) ವಾರ್ಡ್‌ನಲ್ಲಿ ಟ್ರಾಫಿಕ್ ಸಮಸ್ಯೆ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

Scanned with CamScanner

11) ವಾರ್ಡ್‌ನಲ್ಲಿ ವಿದ್ಯುತ್ ಸಮಸ್ಯೆಗಳನ್ನು ಕುರಿತು ಚರ್ಚಿಸಿ ಸೂಕ್ತ ಕ್ರಮ ವಹಿಸಲು ಹಾಗೂ ವಿದ್ಯುತ್ ಕಾಮಗಾರಿ ನಿರ್ವಹಣೆ ವೇಳೆಯಲ್ಲಿ ಕಟಾವು ಮಾಡಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ವಾರ್ಡ್ ಇಂಜಿನಿಯರ್ ಹಾಗೂ ಸದಸ್ಯರಾದ ಶ್ರೀ.ಧರ್ಮರಾಜ್ ಜಿ ನಾಯಕ್ ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ:93 ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ

ಸದಸ್ಯ ಕಾರ್ಯದರ್ಶಿಗಳು
ವಾರ್ಡ್-93, ವಸಂತನಗರ
ಬಿ.ಬಿ.ಎಂ.ಪಿ

Scanned with CamScanner